ಸಾಕ್ಷಿಯನ್ನು ದಿನಾಂಕಃ **25.09.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ.ವಿ.ಎಸ್. ವಕೀಲರಿಂದಃ**

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ

ದಿನಾಂಕಃ 21.07.2022 ರ ಹೇಳಿಕೆಯ ಪ್ರತಿಯನ್ನು ಹಾಗೂ ಸರ್ವೆ ನಕಾಶೆಯ ದೃಢೀಕೃತ ಪ್ರತಿಯನ್ನು ಕ್ರಮವಾಗಿ ನಿಡಿ. 18 ಮತ್ತು 19 ಎಂದು ಗುರುತಿಸಲಾಯಿತು

**ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನಾವು ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡಿದ 2 ತಿಂಗಳ ತರುವಾಯ ನನ್ನ ತಾಯಿ ಸರ್ವೆಗೆ ಅರ್ಜಿಯನ್ನು ಸಲ್ಲಿಸಿದ್ದರು, ಅದರಂತೆ ಸದ್ರಿ ಸರ್ವೆಯನ್ನು ನಡೆಸಿ ನಿ.ಡಿ. 19ರ ನಕಾಶೆಯನ್ನು ತಯಾರಿಸಿದ್ದಾರೆ. ನಮ್ಮ ಸ್ಥಳವು ಎಲ್ಲಿಯವರೆಗೆ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಲು ನನ್ನ ತಾಯಿ ಸರ್ವೆಯನ್ನು ಮಾಡಿಸಿದ್ದಾರೆ. ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡುವ ಸಂದರ್ಭದಲ್ಲಿ ನಾವು ನಕಾಶೆಯನ್ನು ನೋಡಿದ್ದೇವೆ. ಆ ನಕಾಶೆಯಲ್ಲಿ ದಾವಾ ಜಂಪ್ರಾ ನಂಃ 10ರ ಸ್ಥಳದ ಗಡಿಗಳನ್ನು ಸರಿಯಾಗಿ ತೋರಿಸಿದ್ದೇವೆ.

ದಾವಾ ಜಂಪ್ರಾ ನಂಃ 10ರ ಖರೀದಿ ಕಾಲಕ್ಕೆ ಇದ್ದಂತಹ ನಕಾಶೆಯಲ್ಲಿ ನಮೂದಿಸಿದಂತಹ ಗಡಿ ಗುರುತುಗಳನ್ನು ನೋಡಿದ ತರುವಾಯವೇ ನಾವು ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡಿದ್ದೇವೆ. ಸದ್ರಿ ಖರೀದಿ ಕಾಲಕ್ಕೆ ಇದ್ದಂತಹ ನಕಾಶೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾವು ಖರೀದಿ ಮಾಡುವ ಕಾಲಕ್ಕೆ ಇದ್ದಂತಹ ನಕಾಶೆ ಹಾಗೂ ನಿ.ಡಿ. 19ರ ನಕಾಶೆ ಎರಡೂ ಒಂದೇ ರೀತಿ ಇರುತ್ತವೆ. ಖರೀದಿ ಕಾಲಕ್ಕೆ ನಮ್ಮ ಹತ್ತಿರ ಇದ್ದಂತಹ ನಕಾಶೆಯನ್ನು ನಾವು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿ.ಡಿ. 19ರ ನಕಾಶೆಯನ್ನು ತಯಾರಿಸುವ ಪೂರ್ವದಲ್ಲಿ ದಾವಾ ಜಂಪ್ರಾ ನಂಃ 10ರ ಸ್ಥಳದ ಲಗ್ತದಾರರಿಗೆ ನೋಟಿಸನ್ನು ನೀಡಿದ್ದರು, ಅವರೆಂದರೆ ಅಕ್ಬರ್ ಅಲಿ ಹಾಗೂ ಇನ್ನಿತರರಿಗೆ ನೋಟಿಸನ್ನು ನೀಡಿದ್ದಾರೆ, ಆದರೆ ಅವರ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ. ನಿ.ಡಿ. 19ರ ನಕಾಶೆಯನ್ನು ತಯಾರಿಸುವಾಗ 8 ನೇ ಪ್ರತಿವಾದಿಯು ಹಾಜರಿರಲಿಲ್ಲ. ನಾವು ದಾವಾ ಜಂಪ್ರಾ ನಂಃ 10ರ ಸ್ಥಳವನ್ನು ಖರೀದಿ ಮಾಡುವ ಕಾಲಕ್ಕೆ ಗಡಿ ಗುರುತುಗಳೆಲ್ಲವೂ ಸರಿಯಾಗಿಯೇ ಇದ್ದವು.

1 ನೇ ವಾದಿಯು ನನ್ನ ತಾಯಿಗೆ ಹೊಡೆಯಲು ಮುಂದಾಗಿದ್ದನು, ಆದ್ದರಿಂದ ನಾವು ಪೋಲಿಸರಿಗೆ ದೂರನ್ನು ನೀಡಿದ್ದೆವು. ಆನಂತರ ಸರ್ವೆಯನ್ನು ಮಾಡಿಸಿ ನಿ.ಡಿ. 19 ರಂತೆ ನಕಾಶೆಯನ್ನು ಮಾಡಿದ್ದಾರೆ. ನಾವು ಪೋಲಿಸರಿಗೆ ನೀಡಿದ ದೂರಿನ ಪ್ರತಿ ನಮ್ಮ ಹತ್ತಿರ ಇದ್ದು, ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನಾವು ಸರ್ವೆ ಮಾಡಿಸುವ ಕಾಲಕ್ಕೆ ದಾವಾ ಜಂಪ್ರಾ ನಂಃ 10ರ ಸ್ಥಳದಲ್ಲಿ 1 ನೇ ವಾದಿಯ ಜೋಪಡಿ ಇದ್ದರೂ ಸಹ ನಾವು ಅದನ್ನು ಮುಚ್ಚಿಟ್ಟು ಸರ್ವೆಯನ್ನು ಮಾಡಿಸಿ ದಾಖಲೆಯನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಜಂಪ್ರಾ ನಂಃ 10ರ ಸ್ಥಳದ ಖರೀದಿಯ ಕಾಲಕ್ಕೆ ಇದ್ದಂತಹ ನಕಾಶೆಯು ಪ್ರತಿಯನ್ನು ನಾವು ಉದ್ದೇಶಪೂರ್ವಕವಾಗಿ ಹಾಜರುಪಡಿಸದೇ ದಿ.ಡಿ. 19ರ ನಕಾಶೆಯನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.